**ದಿನಾಂಕಃ 15.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

5. ನಾನು ಹಾಜರು ಪಡಿಸಿರುವ ದಿಃ03.11.2006 ರ ಕ್ರಯಪತ್ರದಲ್ಲಿ ಖಾಲಿ ನಿವೇಶನ ಎಂದು ನಮೂದಾಗಿರುತ್ತದೆಂದರೆ ಸರಿ. ನಾನು ಹಾಜರು ಪಡಿಸಿರುವ ಕ್ರಯಪತ್ರದಲ್ಲಿ ಹಾಲಿ ಪಾಯ ಹಾಕಿಸಿರುವ ಸ್ವತ್ತು ಎಂದು ನಮೂದಿಸಲು ಆಡಚಣೆ ಇತ್ತಾ ಎಂದರೆ ಸಾಕ್ಷಿಯು ಅದು ಅವರು ಮಾಡಿಸಬೇಕಾಗಿರುತ್ತದೆ ನಾನು ಹೇಗೆ ಹೇಳಲಿ ಎಂದು ನುಡಿಯುತ್ತಾರೆ. ಪ್ರತಿವಾದಿ ಅಂದರೆ ಸಾವಿತ್ರಮ್ಮ ಇವರಿಗೆ ಚಂದ್ರಮ್ಮ ರವರು ಬರೆದುಕೊಟ್ಟ ಪತ್ರದಲ್ಲಿ ತಳಹದಿ ಹಾಕಿಸಿರುವ ಸಂಬಂಧ ಪಂಚಾಯತಿಯಲ್ಲಿ 6 ಸಾವಿರದಷ್ಟು ಮೊತ್ತವನ್ನು ಕಟ್ಟಿ ಪಂಚಾಯತಿಯವರಿಗೆ ಪತ್ರವನ್ನು ಬರೆದುಕೊಟ್ಟಿರುವುದಾಗಿ ಆದರೆ ಸದರಿ ಪತ್ರ ನನ್ನ ಬಳಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಹಾಗಾಗಿ ನಾನು ಖರೀದಿ ಮಾಡುವ ಸಂದರ್ಭದಲ್ಲಿ ಅದು ಖಾಲಿ ನಿವೇಶನ ಅಲ್ಲ ಪಾಯ ಹಾಕಿಸಿದ ಸ್ವತ್ತು ಎಂದರೆ ಸರಿ.

6. ನಾನು ಹಾಜರು ಪಡಿಸಿರುವ ಕ್ರಯಪತ್ರದಲ್ಲಿ ಪಾಯ ಹಾಕಿರುವ ಸ್ವತ್ತಿಗೆ ಪಾವತಿಸಬೇಕಿರುವ ಶುಲ್ಕವನ್ನು ಕಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಅದನ್ನು ಈಗಾಗಲೇ ಪಾವತಿ ಮಾಡಿರುವುದರಿಂದ ಕಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ವಾದಪತ್ರದಲ್ಲಿ ಪ್ರತಿವಾದಿಯು ಚಂದ್ರಮ್ಮ ರವರಿಗೆ ಮಾರಾಟ ಮಾಡಿದಾಗ ಪಾಯ ಹಾಕಿಸಿರುವ ಸಂಬಂಧ ಪತ್ರ ಬರೆದುಕೊಟ್ಟಿರುವುದಾಗಿ ಹಾಗೂ ಸ್ವಾಧೀನ ಬಿಟ್ಟುಕೊಟ್ಟಿರುವುದಾಗಿ ನಮೂದು ಮಾಡಲು ಆಡಚಣೆ ಇರಲಿಲ್ಲ ಎಂದರೆ ಸಾಕ್ಷಿಯು ಆಗ ನನಗೆ ಈ ವಿಷಯ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನಗೆ 2022 ರಲ್ಲಿ ದಾಖಲಾತಿಗಳನ್ನು ಪರಿಶೀಲಿಸುವ ಸಮಯದಲ್ಲಿ ಈ ವಿಷಯ ಗೊತ್ತಾಗಿರುತ್ತದೆ.

7. ನಿಪಿ-12 ರಂತೆ ನಾನು ಪಂಚಾಯತಿಗೆ ಸದರಿ ಜಾಗದಲ್ಲಿ ಪಾಯ ಹಾಕಿರುವ ಸಂಬಂಧ ದೂರು ಕೊಟ್ಟಿರುತ್ತೇನೆಂದರೆ ಸರಿ. ಸದರಿ ನಿಪಿ-12 ರಲ್ಲಿ ಯಾರೋ 3 -4 ಜನ ಎಂದು ನಮೂದಿಸಿದ್ದು ಅವರುಗಳ ಹೆಸರನ್ನು ನಾನು ದಾವೆಯಲ್ಲಿ ಸೇರಿಸಿಲ್ಲ. ಪಾಯ

ಹಾಕಿಸಿರುವುದು ಸೈಟ್ ನಂ.30 ಅಥವಾ 31 ಎಂಬುದಾಗಿ ತೋರಿಸುವ ಸಲುವಾಗಿ ನಾನು ಯಾವುದೇ ಸ್ಕೆಚ್ ಅಥವಾ ಪ್ಲಾನ್ ನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಅದರ ಸಂಬಂಧ ಸರ್ವೆ ಮಾಡಿರುವ ವಿಡಿಯೇ ಇದೆ ಆದರೆ ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದು ನುಡಿಯತ್ತಾರೆ. ಮುಂದುವರಿದು ಸರ್ವೆ ನಂ.31 ಎಂಬುದಾಗಿ ಅವರು ತಿಳಿಸಿರುತ್ತಾರೆಂದು ನುಡಿಯುತ್ತಾರೆ.

8. ಪ್ರತಿವಾದಿಯು ಚಂದ್ರಮ್ಮ ರವರಿಗೆ ಪಾಯ ಹಾಕಿರುವ ಜಾಗದ ಸಂಬಂಧ ಯಾವುದೆ ಪತ್ರವನ್ನು ಬರೆದುಕೊಟ್ಟಿಲ್ಲ ಅದೇ ರೀತಿ 4 ಸಾವಿರ ಅಥವಾ 6 ಸಾವಿರ ರೂಗಳನ್ನು ಅವರಿಂದ ಪಡೆದುಕೊಂಡಿಲ್ಲ ಹಾಗೂ ಸ್ವಾಧೀನವನ್ನು ಬಿಟ್ಟುಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ಸಂಬಂಧ ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಕೇವಲ ಬಾಯಿ ಮಾತಿನಿಂದ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ನಾನು ಈಗ ಹಾಜರು ಪಡಿಸಿರುವ ನಿಶಾನೆಗಳ ದಾಖಲಾತಿಗಳನ್ನು ಹೊರತುಪಡಿಸಿ ಪ್ರತಿವಾದಿಯು ಚಂದ್ರಮ್ಮರವರಿಂದ ಹಣ ಸ್ವೀಕರಿಸಿರುವ ಬಗ್ಗೆ ಹಾಗೂ ಸ್ವಾಧೆನವನ್ನು ಬಿಟ್ಟುಕೊಟ್ಟಿರುವ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ನಾನು ವಕೀಲರಿಗೆ ನೀಡಿರುತ್ತೇನೆಂದು ನುಡಿಯುತ್ತಾರೆ. ಸುಮಾರು 30 ವರ್ಷಗಳ ಹಿಂದೆ ಪ್ರತಿವಾದಿಯು ವಾಸದ ಸಲುವಾಗಿ ಪಾಯ ಹಾಕಿಸಿದ್ದರು ಎಂದರೆ ಸುಳ್ಳು. ಸದರಿ ಪಾಯ ಹಾಕಿಸಿದ ಮೇಲೆ ಹಣದ ಕೊರತೆ ಇದ್ದ ಕಾರಣ ಒಂದು ಗುಡಿಸಲು ಹಾಕಿ ಸ್ವಾಧೀನದಲ್ಲಿರುತ್ತಾರೆಂದರೆ ಸುಳ್ಳು.

9. ಪ್ರತಿವಾದಿಗೆ ಸರ್ಕಾರದಿಂದ ನೀಡುತ್ತಿದ್ದ ನಿವೇಶನದಲ್ಲಿ ಸೈಟುಗಳ ಸಂಖ್ಯೆ ವ್ಯತ್ಯಾಸವಿದ್ದು ನಂತರದಲ್ಲಿ ದಿ:05.01.1991 ರಲ್ಲಿ ಸರ್ಕಾರ ಮಾಡಿದ ಆದೇಶದ ಅನ್ವಯ ಸೈಟ್ ನಂ.30 ನ್ನು ಪ್ರತಿವಾದಿಗೆ ನೀಡಿರುತ್ತಾರೆಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ನನ್ನದು ಸೈಟ್ ನಂ.31 ಎಂದು ನುಡಿಯತ್ತಾರೆ. ಸೈಟ್ 30 ಹಾಗೂ 31 ಅಕ್ಕಪಕ್ಕದ ಸೈಟುಗಳು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ಪಾಯ ಹಾಕಿಸಿಕೊಂಡು ಅಲ್ಲಿ ಸ್ವಾಧೀನದಲ್ಲಿದ್ದರೂ ಸಹಿತ ಉದ್ದೇಶಪೂರ್ವಕವಾಗಿ ನಾನು ಅವರ ವಿರುದ್ಧ ಸುಳ್ಳು ದಾವೆ ಹಾಕಿರುತ್ತೇನೆಂದರೆ

ಸಾಕ್ಷಿಯು ಅವರೇ ನನ್ನಮೇಲೆ ದಬ್ಬಾಳಿಕೆ ಮಾಡಿ ನಾನು ಬೆಂಗಳೂರಿನಲ್ಲಿರುವ ರಾತ್ರೋರಾತ್ರಿ ಶೆಡ್ ಹಾಕಿಸಿರುತ್ತಾರೆಂದು ನುಡಿಯುತ್ತಾರೆ. ಈ ಸಂಬಂಧ ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರು ಪಡಿಸಿರುತ್ತೇನೆ. ಖಾಲಿ ಜಾಗ ಇದ್ದ ಬಗ್ಗೆ ಹಾಗೂ ನಂತರದಲ್ಲಿ ಶೆಡ್ ಹಾಕಿರುವ ಬಗ್ಗೆ ಪ್ರತಿಯೊಂದು ಪೋಟೋಗಳನ್ನು ವಕೀಲರಿಗೆ ನೀಡಿರುತ್ತೇನೆ.

10. ಪ್ರತಿವಾದಿ ಹಾಲಿ ಹಾಕಿಸಿದ ಪಾಯ ಜಾಗದಲ್ಲಿ ಶೀಟಿನ ಮನೆಯನ್ನು ಕಟ್ಟಿ ಅದರಲ್ಲಿ ವಾಸವಿದ್ದಾರೆಂದರೆ ಸಾಕ್ಷಿಯು ಅಲ್ಲಿ ಯಾರೂ ಇರುವುದಿಲ್ಲ ಮನೆ ಖಾಲಿ ಇರುತ್ತದೆಂದು ನುಡಿಯುತ್ತಾರೆ. ಒಂದು ಮನೆಯನ್ನು ಕಟ್ಟಬೇಕಾದರೆ ಅಂದಾಜು 1 ರಿಂದ 2 ತಿಂಗಳು ಸಮಯ ಬೇಕಾಗುತ್ತದೆಂದರೆ ಸಾಕ್ಷಿಯು ಅವರು 4 ದಿನಗಳಲ್ಲಿ ಕಟ್ಟಿರುತ್ತಾರೆಂದು ನುಡಿಯುತ್ತಾರೆ. ನಾನು ಅವರು ಮನೆಯನ್ನು ಕಟ್ಟಲು ಶುರು ಮಾಡಿದಾಗ ನಾನು ತಡೆಯಲು ಹೋದಾಗ ಅವರು ಗಲಾಟೆ ಮಾಡಿದ ಕಾರಣ ನಾನು ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ಮುಂದುವರಿದು ಬೆಳಿಗ್ಗೆ ಹೋಗಿ ಕೇಳಿದಾಗ ರಾತ್ರಿ ಕಟ್ಟಿರುತ್ತಾರೆಂದು ನುಡಿಯುತ್ತಾರೆ. ನಾನು ಕೇಳಲು ಹೋದಾಗ ನನ್ನ ಜೊತೆ ಇರಲಿಲ್ಲ ನಾನು ಒಬ್ಬಳೇ ಹೋಗಿದ್ದೆ ಎಂದು ನುಡಿಯುತ್ತಾರೆ. ನಾನು ಅಲ್ಲಿ ಹೋಗಿದ್ದು ಪ್ರತಿವಾದಿ ಮನೆ ಕಟ್ಟುತ್ತಿದ್ದ ಬಗ್ಗೆ ನಾನು ನಿಂತು ಪೊಟೋ ತೆಗೆಸಿಕೊಂಡಿರುತ್ತೇನಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ರಾತ್ರೋರಾತ್ರಿ ಮನೆ ಕಟ್ಟುತ್ತಿರುವ ಬಗ್ಗೆ ಪಂಚಾಯತಿಗೆ ನಾನು ಅರ್ಜಿ ಕೊಟ್ಟಿರುತ್ತೇನೆ. ಅರ್ಜಿ ಕೊಟ್ಟ ನಂತರ ಪಂಚಾಯತಿಯವರು ಸರ್ವೆ ಮಾಡಿರುತ್ತಾರೆ. ಸದರಿ ದಾಖಲೆಯನ್ನು ನಾನು ಹಾಜರು ಪಡಿಸಿಲ್ಲ ಅವರು ನನಗೆ ಕೊಟ್ಟಿರುವುದಿಲ್ಲ ಕೇವಲ ವಿಡಿಯೋ ಇರುತ್ತದೆಂದು ನುಡಿಯುತ್ತಾರೆ. ಮನೆ ಕಟ್ಟುವ ಸಂದರ್ಭದಲ್ಲಿ ನಾನು ದೂರನ್ನು ಕೊಟ್ಟಿರುತ್ತೇನೆ. ದೂರು ಕೊಟ್ಟ ಪ್ರತಿಯನ್ನು ಪಂಚಾಯತಿಯವರು ನನಗೆ ಕೊಟ್ಟಿರುವುದಿಲ್ಲ ಹಾಗಾಗಿ ಅದನ್ನು ಹಾಜರು ಪಡಿಸಿರುವುದಿಲ್ಲ. ಸಾಮಾನ್ಯವಾಗಿ ನಾವು ಅರ್ಜಿ ಕೊಟ್ಟಾಗ ಅದನ್ನು ಸ್ವೀಕೃತಿ ಮಾಡಿದ ಒಂದು ಪ್ರತಿ ಕೊಡುತ್ತಾರೆಂದರೆ ಸರಿ. ಈ ಸಂಬಂಧ ನಾನು ಸ್ವೀಕೃತಿಯನ್ನು ಪಡೆದಿಲ್ಲ. ನಾನು ಪಂಚಾಯತಿಗೆ ಈ ಸಂಬಂಧ ಯಾವುದೇ ಅರ್ಜಿ ಕೊಟ್ಟಿರುವುದಿಲ್ಲ ಈ ಸಂಬಂಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**11.** ಪ್ರತಿವಾದಿಯು ತಾನು ಕಟ್ಟಿ ಕೊಂಡಿರುವ ವಾಸದ ಮನೆಯಲ್ಲಿ ನಿರಂತರವಾಗಿ ಹಾಗೂ ಈಗಲೂ ಸಹಿತ ಸ್ವಾಧೀನದಲ್ಲಿದ್ದಾರೆಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಪ್ರತಿವಾದಿಯ ಜಾಗವನ್ನು ಪಡೆದುಕೊಳ್ಳುವ ಸಂಬಂಧ ಒಂದು ಸುಳ್ಳು ದಾವೆಯನ್ನು ಅವರ ವಿರುದ್ದ ಹಾಕಿರುತ್ತೇನೆಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ಕ್ರಯಪತ್ರವು ಬಸವರಾಜಮ್ಮರವರು ಸ್ವಾಧೀನವಿಲ್ಲದೇ ಇರುವ ಜಾಗದ ಕ್ರಯಪತ್ರ ಆಗಿರುತ್ತದೆಂದರೆ ಸರಿಯಲ್ಲ. ಬಸವರಾಜಮ್ಮರವರು ಮಾರಾಟ ಮಾಡುವ ಸಂದರ್ಭದಲ್ಲಿಯೂ ಸಹಿತ ಪ್ರತಿವಾದಿಯು ಪಾಯ ಹಾಕಿಕೊಂಡು ಸ್ವಾಧೀನದಲ್ಲಿದ್ದ ಜಾಗವನ್ನು ನಾನು ಕ್ರಯ ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಯು ಪಾಯ ಹಾಕಿರುವ ಜಾಗವನ್ನು ಬಸವರಾಜಮ್ಮರವರಿಗೆ ಬಿಟ್ಟುಕೊಟ್ಟಿರುವ ಬಗ್ಗೆ ಯಾವುದೇ ರೀತಿ ದಾಖಲೆಯನ್ನು ಹಾಜರು ಪಡಿಸಿಲ್ಲ ಅದೇ ರೀತಿ ಕ್ರಯಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಾನು ಬಸವರಾಜಮ್ಮ ಸೇರಿಕೊಂಡು ಕಾನೂನು ಬದ್ದವಲ್ಲದ ಕ್ರಯಪತ್ರವನ್ನು ಮಾಡಿಸಿ ಸದರಿ ಸುಳ್ಳು ದಾವೆಯನ್ನು ಪ್ರತಿವಾದಿಯ ವಿರುದ್ದ ಹಾಕಿರುತ್ತೇನೆಂದರೆ ಸರಿಯಲ್ಲ. ಅದೇ ರೀತಿ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**